MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 4-5-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪ್ರತಿಕೂಲ ಹವಾಮಾನ, ಅಕಾಲಿಕ ಮಳೆ, ಟೀ ಸೊಳ್ಳೆ ಪೀಡೆಯಿಂದ ಕಚ್ಚಾ ಗೋಡಂಬಿ ಉತ್ಪಾದನೆ ಗಣನೀಯ ಇಳಿಕೆ

ಪ್ರತಿಕೂಲ ಹವಾಮಾನ, ನವೆಂಬರ್, ಡಿಸೆಂಬರ್ ವರೆಗೂ ಸುರಿದ ಮಳೆಯಿಂದ ಚಳಿಗಾಲ ಆರಂಭ ವಿಳಂಭವಾಗಿತ್ತು. ವಿಳಂಭವಾದರೂ ಚಳಿಗಾಲದ ಆರಂಭದ ಹವಾಮಾನ ಉತ್ತಮವಿದ್ದುದರಿಂದ ಉತ್ತಮ ಬೆಳೆ ಉತ್ಪಾದನೆಯ ನಿರೀಕ್ಷೆಯಿತ್ತು. ಆದರೆ ಮತ್ತೆ ಹವಾಮಾನ ವೈಪರೀತ್ಯ ತಲೆದೋರಿ ಮೋಡ, ಮಳೆ ಸಾಮಾನ್ಯವಾಗಿತ್ತು. ಅಕಾಲಿಕ ಮಳೆಯೊಂದಿಗೆ ಈಗ , ಟೀ ಸೊಳ್ಳೆ ಹಾವಳಿಯಿಂದ ಇರುವ ಫಸಲೂ ಹಾನಿಯಾಗುತ್ತದೆಯೆನ್ನಲಾಗಿದ್ದು, ಕಚ್ಚಾ ಗೋಡಂಬಿ ಉತ್ಪಾದನೆಯಲ್ಲಿ ಗಣನೀಯ ಇಳಿಕೆಯಾಗಲಿದೆಯೆನ್ನಲಾಗಿದೆ. ದರವೂ ನಿರಾಶಾದಾಯಕವಾಗಿದ್ದು, ಬೆಳೆಗಾರರಲ್ಲಿ ನಿರಾಶಾಭಾವನೆ ಮೂಡಿದೆಯೆನ್ನಲಾಗಿದೆ. ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಗಣನೀಯ ಇಳಿಕೆಯಾಗುವ ಸಾಧ್ಯತೆಗಳಿವೆ. ಈಗಾಗಲೇ ಕರ್ನಾಟಕ, ಕೇರಳ ಗಡಿಭಾಗಗಳ ಆವಕ ೫೦ ಶೇಕಡಾ ಇಳಿಕೆ ಕಂಡಿದೆಯೆನ್ನಲಾಗಿದೆ.

## ಪಕ್ಷಿ ಆಹಾರ ದರ ಹೆಚ್ಚಳ, ಬ್ರಾಯ್ಲರ್ ಉತ್ಪಾದನೆ ಕಡಿತ

ಪಕ್ಷಿ ಆಹಾರ ತಯಾರಿಕೆಯಲ್ಲಿ ಪ್ರಧಾನವಾಗಿ ಉಪಯೋಗಿಸುತ್ತಿರುವ ಜೋಳ ಹಾಗೂ ಸೋಯಾ ಮೀಲ್ ದರಗಳು ತೀವ್ರ ಹೆಚ್ಚಳವಾಗಿರುವುದರಿಂದ ಭಾರತದ ಬ್ರಾಯ್ಲರ್ ಉತ್ಪಾದನಾ ಘಟಕಗಳು ತಮ್ಮ ಉತ್ಪಾದನೆಗಿಂತ ೧೦ ರಿಂದ ೨೫ ಶೇಕಡಾ ಉತ್ಪಾದನೆ ಕಡಿತಗೊಳಿಸಿವೆಯೆನ್ನಲಾಗಿದೆ. ಪಶ್ಚಿಮ ತಮಿಳುನಾಡಿನ ಪಲ್ಲಡಂನ ೫೦೦೦ ಬ್ರಾಯ್ಲರ್ ಫಾರಂಗಳು ವಾರಕ್ಕೆ ೧೦ ಲಕ್ಷ ಚಿಕನ್ ಉತ್ಪಾದಿಸುತ್ತಿದ್ದು, ನೀಲಗಿರಿ, ದಿಂಡಿಗಲ್ ಹಾಗೂ ತಿರುಪುರ್‌ಗಳಿಗೆ ಸರಬರಾಜು ಮಾಡುತ್ತಿದೆಯೆನ್ನಲಾಗಿದೆ.

## ಜೋಳ ಸ್ಪಾಟ್ ದರ ೨ ರಿಂದ ೮ ಶೇಕಡಾ ಹೆಚ್ಚಳ

ಜೋಳ ಸ್ಪಾಟ್ ದರ ೨ ರಿಂದ ೮ ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.

**ಸೋಯಾಬೀನ್, ಸೋಯಾಬೀನ್ ಎಣ್ಣೆ ಹಾಗೂ ಸೋಯಾಮೀಲ್ ದರ ಹೆಚ್ಚಳ**

ಜಾಗತಿಕ ಹಾಗೂ ದೇಶೀ ಮಾರುಕಟ್ಟೆಗಳಲ್ಲಿ ಸೋಯಾಬೀನ್, ಸೋಯಾಬೀನ್ ಎಣ್ಣೆ ಹಾಗೂ ಸೋಯಾಮೀಲ್ ದರಗಳು ಹೆಚ್ಚಳವಾಗಿದೆ.

## ಪಂಜಾಬ್‌ನಲ್ಲಿ ಬೇಸಿಗೆ ನೀರಾವರಿ ಜೋಳ ಬೆಳೆ ೨೦ ಶೇಕಡಾ ಬಿತ್ತನೆ ಹೆಚ್ಚಳ

ಈ ವರ್ಷ ಪಂಜಾಬ್‌ನಲ್ಲಿ ಬೇಸಿಗೆಯ ನೀರಾವರಿ ಜೋಳ ಬಿತ್ತನೆ ೨೦ ಶೇಕಡಾ ಹೆಚ್ಚಳವಾಗಿದ್ದು, ಸುಮಾರು ೪೦೦೦೦ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಪ್ರದೇಶದಲ್ಲಿ ಜೋಳ ಬಿತ್ತನೆ ಮಾಡಲಾಗಿದೆ. ಬಿಹಾರದಲ್ಲಿ ರಾಬಿ ಬೆಳೆಯ ಆವಕ ಪೂರ್ಣ ಪ್ರಮಾಣದಲ್ಲಿ ಬರುತ್ತಿದ್ದು ದರ ಸ್ವಲ್ಪ ಹೆಚ್ಚಳ ಕಂಡಿದೆ. ಕರ್ನಾಟಕದಲ್ಲಿ ದರ ಉತ್ತಮವಿದ್ದು ಸ್ಥಿರವಿದೆ.

## ಅಧಿಕ ತಾಪಮಾನ ಬೇಸಿಗೆ ಬೇಳೆಕಾಳು ಬೆಳೆ ಉತ್ಪಾದನೆ ಇಳಿಕೆ ಸಾಧ್ಯತೆ

ಈ ವರ್ಷ ಬೇಸಿಗೆ ಬೇಳೆಕಾಳು, ಸಾಸಿವೆ ಹಾಗೂ ಇತರ ಬೆಳೆಗಳಿಗೆ ಅಧಿಕ ತಾಪಮಾನದಿಂದ ಹಾನಿಯಾಗುವ ಸಾಧ್ಯತೆಯಿದ್ದು, ಬೆಳೆಗಳ ಉತ್ಪಾದನೆ ಕಡಿಮೆಯಾಗುವ ಸಾಧ್ಯತೆಯಿದೆ.

## ಮೇ ತಿಂಗಳ ಸಕ್ಕರೆ ಮಾರಾಟ ಕೋಟಾ ೨೨.೫ ಲಕ್ಷ ಟನ್‌ಗಳು

ಸರಕಾರ ಮೇ ತಿಂಗಳಲ್ಲಿ ದೇಶದ ಸಕ್ಕರೆ ಮಾರಾಟ ಕೋಟಾ ೨೨.೫ ಲಕ್ಷ ಟನ್‌ಗಳಿಗೆ ನಿಗದಿಗೊಳಿಸಿದೆ. ಹಿಂದಿನ ವರ್ಷ ಇದೇ ತಿಂಗಳ ಮಾರಾಟ ಕೋಟಾ ೨೨ ಲಕ್ಷ ಟನ್‌ಗಳಾಗಿತ್ತು.

## 0.55 ಮೆ.ಟನ್ ಜಿ.ಎಮ್ ಸೋಯಾಮೀಲ್ ಆಮದಿಗೆ ಅವಕಾಶ

ಸರಕಾರ ಈ ವರ್ಷ ಸೆಪ್ಟೆಂಬರ್ 30 ರ ಅವಧಿಯೊಳಗೆ 0.55 ಮೆ.ಟನ್ ಜೀನ್ ಪರಿವರ್ತಿತ ಬೆಳೆಯ ಸೋಯಾಮೀಲ್ ಆಮದಿಗೆ ಅವಕಾಶ ನೀಡಿದೆಯೆನ್ನಲಾಗಿದೆ. ಪೌಲ್ಟ್ರಿ ಫೀಡ್ ತಯಾರಿಕೆಗೆ ಉಪಯೋಗವಾಗುವಂತೆ ಈ ಅವಕಾಶ ನೀಡಲಾಗಿದೆಯೆನ್ನಲಾಗಿದೆ.